**ಎರಡನೆ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು ಪ್ರ.ವರ್ಗ ಗೋಕಾಕ ಇವರ ನ್ಯಾಯಾಲಯದಲ್ಲಿ**

**ಸಾಃ ಗೋಕಾಕ.**

ಸಿ.ಸಿ. ನಂ.**2273/2017**

ಆರೋಪಿತನ ಹೆಸರುಃ 1) ಬಸವಣ್ಣಿ ಭೀಮಪ್ಪ ಬೀಜನಾಯಕ

ಸಾಃ ರಾಜಕಟ್ಟಿ ಗ್ರಾಮ

ತಾಃ ಹುಕ್ಕೇರಿ, ಜಿಃ ಬೆಳಗಾವಿ

**ಕಲಂ 313 ಸಿ.ಆರ್.ಪಿ.ಸಿ. ಕೆಳಗೆ ಆರೋಪಿತರ ಹೇಳಿಕೆ**

ಪ್ರಃ **1** ನಿನ್ನ ವಿರುದ್ದ ನ್ಯಾಯಾಲಯದಲ್ಲಿ ಅಭಿಯೋಜಕರ ಪರ ವಿಚಾರಣೆ ಮಾಡಿಸಿದ ಸಾಕ್ಷಿಗಳು ನೀಡಿರುವ ಹೇಳಿಕೆಗಳ ಬಗ್ಗೆ ನಿಮಗೆ ತಿಳಿದಿದೆಯಾ?

ಉಃ

ಪ್ರಃ **2** ಪ್ರಾ.ಸಾ.1 ಬಿ.ಎಸ್. ಬಾವನ್ನವರ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನಂದರೆ, ತಾನು 2014 ರಿಂದ 2023ರವರೆಗೆ ಗೋಕಾಕ ಅಬಕಾರಿ ವಲಯ ಕಛೇರಿಯಲ್ಲಿ ಅಬಕಾರಿ ಪೇದೆ ಅಂತಾ ಕೆಲಸ ಮಾಡಿರುತ್ತೇನೆ.

ದಿಃ 03-01-2017 ರಂದು ಅಬಕಾರಿ ನಿರೀಕ್ಷಕರ ಕಛೇರಿ ಗೋಕಾಕ ವಲಯ ಗೋಕಾಕ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ತಮ್ಮ ಮೇಲಾಧಿಕಾರಿಯಾದ ಚಾಸಾ-1ರವರು ತನ್ನನ್ನು ಕರೆದು ಗೋಕಾಕ ತಾಲೂಕಿನ ಗುಜನಾಳ ಗ್ರಾಮದ ಅರಣ್ಯ ಪ್ರದೇಶದಲ್ಲಿ ಕಳ್ಳ ಬಟ್ಟಿ ಸಾರಾಯಿ ಮಾರಾಟವಾಗುತ್ತಿದೆ ಎಂದು ಬಾತ್ಮಿ ಬಂದಿದೆ ಆದಕಾರಣ ತಮ್ಮ ಜೊತೆ ಬರಲು ಹೇಳಿದ್ದು ಸದರಿ ಅವರ ಆದೇಶದ ಮೇರೆಗೆ ಚಾಸಾ-1 ರವರ ಜೊತೆ ಕೂಡಿಕೊಂಡು ತಮ್ಮ ಕಛೇರಿಯಿಂದ ಖಾಸಗಿ ವಾಹನದಲ್ಲಿ ಸಾಯಂಕಾಲ 7 ಗಂಟೆಗೆ ಕಛೇರಿಯಿಂದ ಹೊರಟು ಸಾಯಂಕಾಲ 7-45 ಗಂಟೆಗೆ ಅಂಕಲಗಿ ಗ್ರಾಮಕ್ಕೆ ಬಂದು ವಾಹನವನ್ನು ನಿಲ್ಲಿಸಿ ಚಾಸಾ-1 ರವರ ಆದೇಶದ ಮೇರೆಗೆ ಅಲ್ಲೆ ನಿಂತ ಇಬ್ಬರು ಸಾರ್ವಜನಿಕರನ್ನು ಪಂಚರಾಗಲು ವಿನಂತಿಸಿಕೊಂಡೇವು ಅದರಲ್ಲಿ ಒಬ್ಬರು ಮಾತ್ರ ನಮ್ಮ ಮನವಿಗೆ ಸ್ಪಂದಿಸಿ ನಮ್ಮ ಜೊತೆ ಬರಲು ಒಪ್ಪಿ ಕೊಂಡರು. ಅವರನ್ನು ಕರೆದುಕೊಂಡು ಅಲ್ಲಿಂದ ಹೊರಟು ಗುಜನಾಳ ಗ್ರಾಮದ ಹಿಂಬಾಗದಲ್ಲಿ ತಮ್ಮ ವಾಹನವನ್ನು ನಿಲ್ಲಿಸಿದೇವು. ಚಾಸಾ-1ರವರು ಶೋದನಾ ಸಮುಚ್ಚಿತ ವರದಿಯನ್ನು ತಯಾರಿಸಿಕೊಂಡರು. ನಂತರ ಪಂಚರು ಒಬ್ಬರೇ ಇದ್ದಕಾರಣ ತಮ್ಮ ಸಹ ಸಿಬ್ಬಂದಿ ಆದ ಚಾಸಾ-3 ರವರನ್ನು ಪಂಚರಾಗಿ ಚಾಸಾ-1ರವರು ನೇಮಿಸಿದರು. ನಂತರ ಗುಜನಾಳ ಗ್ರಾಮದ ಹಿಂಬಾಗದ ಅರಣ್ಯ ಪ್ರದೇಶದಲ್ಲಿ ಹೋಗಿ ಸ್ವಲ್ಪ ದೂರ ಹೋದ ನಂತರ ಒಬ್ಬ ದೂರದಲ್ಲಿ ಕುಳಿತ ವ್ಯಕ್ತಿಯು ತಮ್ಮನ್ನು ನೊಡಿ ಓಡಲು ಪ್ರಯತ್ನಿಸಿದನು ಆಗ ನಾವು ಅವನನ್ನು ಹಿಡಿಯಲು ಪ್ರಯತ್ನಿಸಿದೇವು ಕತ್ತಲು ಇದ್ದ ಕಾರಣ ವ್ಯಕ್ತಿಯು ಅರಣ್ಯದಲ್ಲಿ ನಮ್ಮ ಕೈಯಿಗೆ ಸಿಗಲಿಲ್ಲ.

ನಂತರ ವ್ಯಕ್ತಿಯು ಕುಳಿತಿದ್ದ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದಾಗ ಒಂದು ಚೀಲ ಕಂಡು ಬಂತು ಆ ಚೀಲವನ್ನು ಪಂಚರ ಸುಮಕ್ಷಮ ತೆರೆದು ನೋಡಿದಾಗ ಒಂದು ಕಪ್ಪು ಬಣ್ಣದ ರಬ್ಬರ ಟ್ಯೂಬನಲ್ಲಿ ಸುಮಾರು 20 ಲೀಟರದಷ್ಟು ಕಳ್ಳ ಬಟ್ಟಿ ಸಾರಾಯಿ ಇರುವುದು ಕಂಡು ಬಂದಿತು ಆಗ ಚಾಸಾ-1 ರವರು ಅಲ್ಲೆ ನಿಂತಿದ್ದ ಇಬರು ವ್ಯಕ್ತಿಗಳನ್ನು ವಿಚಾರಿಸಿ ಓಡಿ ಹೊದ ವ್ಯಕ್ತಿ ಯಾರು ಎಂದು ಕೇಳಲಾಗಿ ಅದರಲ್ಲಿ ಒಬ್ಬ ಅವನ ಹೆಸರು ಬಸವಣ್ಣಿ ಭಿಮಪ್ಪಾ ನಾಯಿಕ ಉರ್ಪ ಬಿಜನಾಯಿಕ ಸಾಃ ರಾಜಕಟ್ಟಿ ತಾಃ ಹುಕ್ಕೇರಿ ಎಂದು ತಿಳಿಸಿದನು. ತಾವು ಕೆಳಗೆ ಬಂದು ಚಾಸಾ-1ರವರು ಊರ ಜನರನ್ನು ವಿಚಾರಿಸಿದಾಗ ಬಿಜನಾಯಿಕ ಎಂಬ ವ್ಯಕ್ತಿ ದಿನಾಲೂ ಬಂದು ಇಲ್ಲಿ ಕಳ್ಳ ಬಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿಸಿದರು ಆಗ ಚಾಸಾ-1ರವರು ಅವನನ್ನು ಬಂಧಿಸಬೇಕೆಂದು ತಿಳಿಸಿ ಸಿಕ್ಕಿರುವಂತ ಕಳ್ಳಬಟ್ಟಿ ಸಾರಾಯಿಂದ ಒಂದು 180 ML ಪ್ಲಾಸ್ಟಿಕ ಬಾಟಲನಲ್ಲಿ ರಾಸಾಯನಿಕ ಪರೀಕ್ಷೆಗೂಸ್ಕರ ಸಾಂಪಲ ತೆಗೆದು ಅದಕ್ಕೆ ಅರಿವೆ ಕಟ್ಟಿ ದಾರದಿಂದ ಸುತ್ತಿ ಅರಗು ಹಾಕಿ ಕಛೇರಿ ಸೀಲಿನಿಂದ ಸೀಲ ಮಾಡಲಾಯಿತು. ಅದಕ್ಕೆ ಚಾಸಾ-1ರವರು ಹಾಗೂ ಪಂಚರ ಸಹಿವುಳ್ಳ ಚಿಟಿಗಳನ್ನು ಅಂಟಿಸಲಾಯಿತು. ಸದರಿ ಕೃತ್ಯಕ್ಕೆ ಸಂಬಂದಪಟ್ಟ ಪಚನಾಮೆಯನ್ನು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಬರೆದು ಮುಗಿಸಲಾಯಿತು ನಂತರ ಸಿಕ್ಕ ಮುದ್ದೆಮಾಲನೊಂದಿಗೆ ನಾವು ಮತ್ತು ಚಾಸಾ-1ರವರು ಅಲ್ಲಿಂದ ಕಛೇರಿಗೆ ಮರಳಿದೇವು. ಈ ಗುನ್ನೆಗೆ ಸಂಬಂದಪಟ್ಟಂತೆ ಚಾಸಾ-6ರವರು ಮುಂದೆ ತನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಯೇ ಆರೋಪಿಯಾಗಿರುತ್ತಾನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ **3** ಪ್ರಾಸಾ. 2 ರವಿ ಮಲ್ಲಪ್ಪಾ ಮುರಗೋಡ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ಸೆಪ್ಟೆಂಬರ 2014 ರಿಂದ ಅಗಸ್ಟ 2019 ರವರೆಗೆ ಅಬಕಾರಿ ಉಪಅಧೀಕ್ಷರು ಗೋಕಾಕ ವಲಯದಲ್ಲಿ ಅಂತಾ ಕಾರ್ಯನಿರ್ವಹಿಸಿರುತ್ತೇನೆ.

ದಿಃ 03-01-2017ರಂದು ಸಂಜೆ ಬಂದ ಬಾತ್ಮಿ ಮೇರೆಗೆ ಗೋಕಾಕದಿಂದ ಖಾಸಗಿ ವಾಹನವನ್ನು ತೆಗೆದುಕೊಂಡು ಅಂಕಲಗಿಗೆ ಹೋಗಿ ಇಬ್ಬರನ್ನು ಪಂಚರನ್ನು ಕರೆದು ದಾಳಿ ಮಾಡುವ ವಿಷಯ ತಿಳಿಸಿ ಅವರು ಒಪ್ಪಿದ ಮೇರೆಗ ಅವರನ್ನು ತಮ್ಮ ಜೊತೆ ಕರೆದುಕೊಂಡು ಗುಜನಾಳ ಗ್ರಾಮಕ್ಕೆ ಹೋಗಿ ಗುಡ್ಡದ ವಾರೆಗೆ ನಮ್ಮ ವಾಹನವನ್ನು ನಿಲ್ಲಿಸಿ ನಾವು ಎರಡು ತಂಡವಾಗಿ ಅರ್ಧ ಕಿ.ಮೀ ನಡೆದುಕೊಂಡು ಗುಡ್ಡದ ಕಾಲು ದಾರಿಯಲ್ಲಿ ಹೋಗಿದ್ದು ಅಲ್ಲಿ ಒಬ್ಬ ವ್ಯಕ್ತಿ ತಮ್ಮನ್ನು ನೋಡಿ ಓಡಿ ಹೋದನು. ಅಲ್ಲಿದ್ದ ಅಕ್ಕಪಕ್ಕದವರನ್ನು ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವನ ಹೆಸರು ಬಸವಣ್ಣಿ ಬೀರನಾಯ್ಕ ಅಂತಾ ತಿಳಿಸಿದರು. ಓಡಿ ಹೋದ ವ್ಯಕ್ತಿಯು ನಿಂತ ಸ್ಥಳಕ್ಕೆ ಹೋಗಿ ಶೋಧನಾ ಸಮುಚಿತ ಆಧಾರ ತಯಾರಿಸಿ ಸ್ಥಳವನ್ನು ಪರಿಶೀಲಿಸಲಾಗಿ ಒಂದು ಚೀಲದಲ್ಲಿ ಒಂದು ಕರಿ ಬಣ್ಣದ ರಬ್ಬರ ಟ್ಯೂಬನಲ್ಲಿ 20 ಲೀಟರದಷ್ಟು ಕಳ್ಳಭಟ್ಟಿ ಸರಾಯಿ ಇದ್ದದ್ದು ಕಂಡು ಬಂದಿರುತ್ತದೆ. ಅದರ ವಾಸನೆ ಘಾಟು ವಾಸನೆಯಾಗಿದ್ದು, ಅದು ಕಳ್ಳಭಟ್ಟಿ ಸರಾಯಿ ಇದ್ದು ಅದನ್ನು ಆರೋಪಿ

ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾನೆ ಅಂತಾ ತಿಳಿದು ಬಂತು. ನಂತರ ಅದರಲಿಂದ 180 ಎಂ.ಎಲ.ನ ಕಳ್ಳಭಟ್ಟಿ ಸರಾಯಿಯನ್ನು ಒಂದು ಬಾಟಲಿಯಲ್ಲಿ ಮಾದರಿ ಅಂತಾ ರಸಾಯನಿಕ ಪರೀಕ್ಷೆಗೋಸ್ಕರ ತೆಗೆದು ಅದಕ್ಕೆ ಬಿಳಿ ಬಟ್ಟೆಯನ್ನು ಸುತ್ತಿ ದಾರದಿಂದ ಕಟ್ಟಿ ಅರಗೀನ ಶೀಲ ಮಾಡಿ ನಂತರ ಗುಡ್ಡದ ಕೆಳಗೆ ಇಳಿದು ಬಂದು ಅಲ್ಲಿನ ಊರಿನ ಗ್ರಾಮಸ್ಥರಿಗೆ ಆರೋಪಿಯ ಬಗ್ಗೆ ವಿಚಾರಿಸಲಾಗಿ ಸದರಿಯವರು ಆರೋಪಿತನ ಹೆಸರು ಹೇಳಿ, ಆರೋಪಿತನೇ ಇಲ್ಲಿ ಬಂದು ಕಳ್ಳಭಟ್ಟಿ ಸರಾಯಿ ಮಾರುತ್ತಾನೆ ಅಂತಾ ತಿಳಿಸಿರುತ್ತಾರೆ.

ನಂತರ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮುಗಿಸಿದೆವು. ಅಲ್ಲಿ ದೊರೆತ ಮಾಲನ್ನು ಮತ್ತು ಮಾದರಿ ತೆಗೆದ ಮಾಲನ್ನು ತನ್ನ ತಾಬಾಕ್ಕೆ ತೆಗೆದುಕೊಂಡು ಮರಳಿ ಕಚೇರಿಗೆ ಬಂದು ಸರಕಾರಿ ತರ್ಫೆ ಪಿರ್ಯಾದಿ ದಾಖಲಿಸಿ ನಮ್ಮ ಕಚೇರಿ ಗುನ್ನೆ ನಂ. 76/2016-17 ರಂತೆ ಪ್ರಥಮ ವರ್ತಮಾನವನ್ನು ದಾಖಲಿಸಿರುತ್ತೇನೆ. ಡಿಸಿ ಬೆಳಗಾವಿ ರವರಿಗೆ ಜಪ್ತಾದ ಮಾಲನ್ನು ತನ್ನ ತಾಬಾದಲ್ಲಿ ಇಟ್ಟುಕೊಳ್ಳಲು ಮತ್ತು ಮುಂದಿನ ತನಿಖೆಯನ್ನು ಕೈಗೊಳ್ಳಲು ಮನವಿಯನ್ನು ಬರೆದು ಮರುದಿನ ಬೆಳಿಗ್ಗೆ ಮನವಿಯನ್ನು ಕಳುಹಿಸಿರುತ್ತೇನೆ. ದಿಃ 17-01-2017 ರಂದು ರಸಾಯನಿಕ ಪರೀಕ್ಷೆಗೋಸ್ಕರ ಧಾರವಾಡ ಪ್ರಯೋಗಾಲಯಕ್ಕೆ ಮನವಿ ಪತ್ರ ಬರೆದು ಅದೇ ದಿನ ಚಾಸಾ-6 ರವರಿಗೆ ಮುಂದಿನ ತನಿಖೆಯನ್ನು ಹಸ್ತಾಂತರಿಸಿರುತ್ತೇನೆ. ಆರೋಪಿಯನ್ನು ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ ಆರೋಪಿ ಆಗಿರುತ್ತಾನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಃ **4** ಪ್ರಾಸಾ. 3 ಸಂತೋಷ ಬಸವರಾಜ ಹಾದಿಮನಿ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ಸಪ್ಟೆಂಬರ 2016 ರಿಂದ ಅಗಸ್ಟ 2023 ರವರೆಗೆ ಗೋಕಾಕ ಅಬಕಾರಿ ಇಲಾಖೆಯಲ್ಲಿ ಅಬಕಾರಿ ರಕ್ಷಕ ಅಂತಾ ಕೆಲಸ ಮಾಡಿರುತ್ತೇನೆ.

ದಿಃ 03-01-2017 ರಂದು ಚಾಸಾ-1 ರವರು ತನ್ನನ್ನು ಕಚೇರಿಯಲ್ಲಿ ಇದ್ದಾಗ ಕರೆದು ಖಚಿತ ಬಾತ್ಮಿ ಮೇರೆಗೆ ಗುಜನಾಳ ಗ್ರಾಮದಲ್ಲಿ ಅಬಕಾರಿ ದಾಳಿ ಮಾಡುವದಿದೆ ಅದಕ್ಕೆ ನೀನು ನನ್ನ ಜೊತೆ ಬರಬೇಕೆಂದು ಮೌಖಿಕ ಆದೇಶದ ಮೇರೆಗೆ ತಿಳಿಸಿದಾಗ ತಾನು ಅದಕ್ಕೆ ಒಪ್ಪಿ ರಾತ್ರಿ 7-00 ಗಂಟೆಗೆ ತಾನು ಹಾಗೂ ತಮ್ಮ ಚಾಸಾ-1 ಹಾಗೂ ಸಿಬ್ಬಂದಿಯೊಂದಿಗೆ ಖಾಸಗಿ ವಾಹನ ಟ್ರ್ಯಾಕ್ಸ ನಲ್ಲಿ ಕುಳಿತುಕೊಂಡು ಗೋಕಾಕನ್ನು ಬಿಟ್ಟು ಅಂಕಲಗಿ ಗ್ರಾಮಕ್ಕೆ ತಲುಪಿ ಪಂಚರಿಗಾಗಿ ಹುಡುಕಾಡಿದಾಗ ಒಬ್ಬ ವ್ಯಕ್ತಿ ನಮಗೆ ಸಿಕ್ಕು ಖಚಿತ ಬಾತ್ಮಿ ಮೇರೆಗೆ ದಾಳಿ ಮಾಡುವದಿದೆ ಅಲ್ಲಿ ನಡೆದ ಘಟನೆಗೆ ಪಂಚರಾಗಬೇಕು ಎಂದು ಕೇಳಿಕೊಂಡಾಗ ರಾಜು ಲಕ್ಷಣ ಕೊಪ್ಪದ ಎಂಬ ವ್ಯಕ್ತಿಯು ಒಪ್ಪಿ ಕೊಂಡನು. ಆತನನ್ನು ಕರೆದುಕೊಂಡು ಗುಜನಾಳ ಗ್ರಾಮಕ್ಕೆ ಊರಿನಿಂದ ಹೊರಕ್ಕೆ ಗಾಡಿಯನ್ನು ನಿಲ್ಲಿಸಿದೆವು ಹಾಗೂ ಚಾಸಾ-1 ರವರು ಎರಡು ತಂಡಗಳನ್ನಾಗಿ ಮಾಡಿ ಒಂದು ತಂಡದಲ್ಲಿ ಒಬ್ಬ ಪಂಚನನ್ನು ಇನ್ನೊಂದು ತಂಡದಲ್ಲಿ ನನ್ನನ್ನು ಪಂಚರಾಗಲು ಚಾಸಾ-1 ರವರು ಕೇಳಿಕೊಂಡರು ಅದಕ್ಕೆ ನಾನು ಒಪ್ಪಿ, ಅಲ್ಲಿಂದ ಕುಡುಕರ ಸೊಗಿನಲ್ಲಿ ಗುಜನಾಳ ಗುಡ್ಡದ ಕಡೆ ಹೊರಟೆವು. ಆಗ ಒಬ್ಬ

ಆಸಾಮಿಯು ನಮ್ಮನ್ನು ನೋಡಿ ಓಡ ತೋಡಗಿದನು. ಆತನನ್ನು ನಮ್ಮೆಲ್ಲ ಸಿಬ್ಬಂದಿ ಬೆನ್ನು ಹತ್ತಿ ಹಿಡಿಯಲು ಹೋದಾಗ ತಪ್ಪಿ ಸಿಕೊಂಡನು. ಆತನು ಇದ್ದ ಜಾಗವನ್ನು ತಪಾಸಿಸಲಾಗಿ ಒಂದು ಚೀಲದಲ್ಲಿ ರಬ್ಬರ ಟ್ಯೂಬದಲ್ಲಿ ಘಾಟ ವಾಸನೆಯುಳ್ಳ ದ್ರವ್ಯ ಇರುವದು ಕಂಡು ಬಂದಿತು. ಅದನ್ನು ಪರಿಶೀಲಿಸಲಾಗಿ ಅದು ಕಳ್ಳಭಟ್ಟಿ ಸರಾಯಿ ಇರುವದು ಖಚಿತವಾಯಿತು.

ಆ ಟ್ಯೂಬನಿಂದ 180 ಎಂ.ಎಲ. ಸಾಮರ್ಥ್ಯದ ಒಂದು ಬಾಟಲಿಯಲ್ಲಿ ಕಳ್ಳಭಟ್ಟಿ ಸರಾಯಿಯನ್ನು ಸ್ಯಾಂಪಲಗೆ ತೆಗೆಯಲಾಯಿತು ಹಾಗೂ ಆ ಸ್ಯಾಂಪಲ ಬಾಟಲಿಗೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಒತ್ತಿ ಇಲಾಖಾ ಮೊಹರಿನಿಂದ ಸ್ಯಾಂಪಲ ಚೀಟಿಗೆ ಒತ್ತಲಾಯಿತು ಹಾಗೂ ಸ್ಯಾಂಪಲ ಚೀಟಿಯನ್ನು ಅಲ್ಲಿಯೇ ತಯಾರಿಸಿ ಅಧಿಕಾರಿಗಳು ಹಾಗೂ ಪಂಚರ ಸಹಿಯನ್ನು ಪಡೆಯಲಾಯಿತು. ಚಾಸಾ-1 ಮೇರೆಗೆ ಟ್ಯೂಬನ್ನು ಕಟ್ಟಲಾಯಿತು ಹಾಗೂ ಅಲ್ಲಿದ್ದಂತಹ ಕೆಲ ವ್ಯಕ್ತಿಗಳನ್ನು ಆ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವರು ಆ ವ್ಯಕ್ತಿಯು ರಾಜನಕಟ್ಟಿಯವನು ಹಾಗೂ ಕಳ್ಳಭಟ್ಟಿಯನ್ನು ಸಾಗಾಟ ಮಾಡಿಕೊಂಡು ಬಂದು ದಿನಾಲು ಮಾರುತ್ತಾನೆ ಎಂದು ತಿಳಿಸಿದರು.

ನಂತರ ಆ ಮುದ್ದೆ ಮಾಲನ್ನು ಜಪ್ತಿ ಮಾಡಿಕೊಂಡು ಊರಿನ ಕೆಳಗೆ ಹೋಗಿ ಊರಿನ ಜನರನ್ನು ಓಡಿ ಹೋದ ಬಗ್ಗೆ ವಿಚಾರಿಸಲಾಗಿ ಅವರು ಆತನ ಹೆಸರನ್ನು ಬಸವಣ್ಣಿ ಭೀಮಪ್ಪಾ ಜಿಜನಾಯಿಕ ಸಾಃ ರಾಜನಕಟ್ಟಿ ಎಂದು ತಿಳಿಸಿದರು ಹಾಗೂ ಆತನು ಕಳ್ಳಭಟ್ಟಿ ಸರಾಯಿಯನ್ನು ಸಾಗಾಟ ಮಾಡಿಕೊಂಡು ಬಂದು ಈ ಸ್ಥಳದಲ್ಲಿ ಮಾರುತ್ತಾನೆ ಅಂತಾ ತಿಳಿಸಿದರು. ಚಾಸಾ-1 ರವರು ಆತನನ್ನು ಬಂಧಿಸಿ ಪ್ರಕರಣ ದಾಖಲ ಮಾಡುತ್ತೇವೆ ಅಂತಾ ತಿಳಿಸಿದರು. ನಂತರ ಊರಿನ ವಾಹನ ನಿಲ್ಲಿಸಿದ ಖಾಸಗಿ ವಾಹನದ ಕಡೆ ಹೋಗಿ ಬ್ಯಾಟರಿ ಬೆಳಕಿನ ಸಹಾಯದಿಂದ ಸಮಯ 8-40 ರಿಂದ 9-30 ಗಂಟೆಯವರೆಗೆ ತಮ್ಮ ಚಾಸಾ-1 ರವರು ಪಂಚನಾಮೆಯನ್ನು ಬರೆದು ಮುಗಿಸಿದರು.

ದಿಃ 17-01-2017 ರಂದು ಚಾಸಾ-1 ರವರು ಒಂದು ಮುಚ್ಚಿದ ಲಕೋಟೆ ಹಾಗೂ 180 ಎಂ.ಎಲ. ಸಾಮರ್ಥ್ಯದ ಶೀಲ ಮಾಡಿದ ಒಂದು ಬಾಟಲಿಯನ್ನು ತನಗೆ ನೀಡಿ ಇದನ್ನು ರಸಾಯನಿಕ ವಿಶ್ಲೇಷಣಾ ವರದಿ ತರಲು ತಿಳಿಸಿದ ನಿಮಿತ್ಯ ತಾನು ಸದರಿ ದಿನದಂದು ಧಾರವಾಡಗೆ ತೆರಳಿ ಅಲ್ಲಿನ ಸಹಾಯ ರಸಾಯನಿಕ ವಿಶ್ಲೇಷಕರು ಧಾರವಾಡ ರವರಿಗೆ ಸದರಿ ಬಾಟಲಿ ಹಾಗೂ ಲಕೋಟೆಯನ್ನು ನೀಡಿದೆನು. ಸಾಯಂಕಾಲ 4-30 ಗಂಟೆಗೆ ಮುಚ್ಚಿದ ಲಕೋಟೆ ಹಾಗೂ ಶೀಲ ಮಾಡಿ ಪ್ಯಾಕ ಮಾಡಿದ 180 ಎಂ.ಎಲ. ಸಾಮರ್ಥ್ಯದ ಶೀಲ ಮಾಡಿದ ಒಂದು ಬಾಟಲಿಯನ್ನು ತನ್ನ ವಶಕ್ಕೆ ಪಡೆದು ಧಾರವಾಡದಿಂದ ಗೋಕಾಕ್ಕೆ ಬಂದೆನು. ದಿಃ 18-01-2017 ರಂದು ಚಾಸಾ-6 ರವರಿಗೆ ಸದರಿ ಲಕೋಟೆ ಹಾಗೂ ಶೀಲ ಮಾಡಿದ ಬಾಟಲಿಯನ್ನು ನೀಡಿ ಸದರಿ ದಿನದಂದು ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ಆರೋಪಿಯಾಗಿರುತ್ತಾನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ **5** ಪ್ರಾಸಾ. 4 ಕಿರಣ ಸಿದ್ದಪ್ಪ ಚಂದರಗಿ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ನವೆಂಬರ್ 2016 ರಿಂದ ಜೂನ್ 2020 ರವರೆಗೆ ಗೋಕಾಕ ವಲಯದಲ್ಲಿ ಅಬಕಾರಿ ಉಪನೀರಿಕ್ಷಕರು ಅಂತಾ ಕಾರ್ಯನಿರ್ವಹಿಸಿರುತ್ತೇನೆ.

ದಿಃ 17-01-2017 ರಂದು ಚಾಸಾ 1 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ದಿಃ 18.01.2017 ರಂದು ರಾಸಾಯನಿಕ ಪರೀಕ್ಷೆಯ ವರದಿಯನ್ನು ಸ್ವಿಕರಿಸಿಕೊಂಡು ಚಾಸಾ 3 ರವರ ಹೇಳಿಕೆ ಪಡೆದುಕೊಂಡೆನು. ಚಾಸಾ 4 ರವರ ರೇಡ ಹೇಳಿಕೆ ಪಡೆದುಕೊಂಡೆನು, ದಿಃ 20.03.2017 ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಿತರ ವಿರುದ್ದ ದೋಷಾರೊಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಃ **6** ಬೇರೆ ಏನಾದರೂ ಹೇಳುವುದಿದೆಯಾ ?

ಉಃ

ಪ್ರಃ **7** ನಿಮ್ಮ ಪರವಾಗಿ ಸಾಕ್ಷಿಗಳನ್ನು ಅಥವಾ ದಾಖಲಾತಿಗಳನ್ನು ಹಾಜರು ಪಡಿಸುವಿರಾ **?**

ಉಃ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರಿಂದ ಬಂದ ಉತ್ತರಗಳ್ಳು ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಅಂತಾ ದೃಡಿಕರಿಸುತ್ತೇನೆ)

**ಗೋಕಾಕ**

**ದಿಃ 24.06.2026** **II ಹೆಚ್ಚುವರಿ ನ್ಯಾ.ದಂ.ಪ್ರ.ವರ್ಗ, ಗೋಕಾಕ.**